# ವಿರಾಟ್ ಕೊಹ್ಲಿ ಖಾರಾ ಬಾತ್!



ಕ್ರಿಕೆಟ್ ಮೈದಾನದಲ್ಲಿ ಆಕ್ರಮಣಕಾರಿ ಸ್ವಭಾವ ಎಷ್ಟೋ ಸಲ ಆಟಕ್ಕೆ ಪೂರಕವಾಗಿರುತ್ತದೆ. ಆದರೆ ಮೈದಾನದ ಹೊರಗೂ ಆಕ್ರಮಣಕಾರಿ ಸ್ವಭಾವವನ್ನು ಪ್ರದರ್ಶಿಸುವುದು ಒಳ್ಳೆಯದೇ? ವಿರಾಟ್ ಕೊಹ್ಲಿಯ ಇತ್ತೀಚಿನ ಅವತಾರಗಳನ್ನು ಗಮನಿಸಿದಾಗ ಈ ಪ್ರಶ್ನೆ ಮೇಲೇಳುವುದು ಸಹಜವೇ. ವಿರಾಟ್ ಕೊಹ್ಲಿ ಭಾರತದ ಅತ್ಯುತ್ತಮ ಕ್ರಿಕೆಟ್ ನಾಯಕರಲ್ಲಿ ಒಬ್ಬಎನ್ನುವುದರಲ್ಲಿ ಎರಡು ಮಾತಿಲ್ಲ. ಆತನ ಆಟದ ವೇಗ, ಪಂದ್ಯದಲ್ಲಿ ಸಂಪೂರ್ಣ ತಲ್ಲೀನನಾಗುವ ಬಗೆ, ಕಠಿಣ ಪಂದ್ಯಗಳಲ್ಲೂ ಮುಂಚೂಣಿಯಲ್ಲಿ ನಿಂತು ಹೋರಾಡುವ ಪರಿಯ ಬಗ್ಗೆ ಎರಡು ಮಾತೇ ಇಲ್ಲ. ತಂಡದ ನಾಯಕತ್ವ ವಹಿಸಿದ ಬಳಿಕ ವೈಯಕ್ತಿಕ ಆಟಕ್ಕೆ ಸ್ವಲ್ಪ ನಿಧಾನಗತಿ ಒದಗುವುದು ಸಹಜ ವಿದ್ಯಮಾನ. ಹಿಂದೆ ಸಚಿನ್ ತೆಂಡೂಲ್ಕರ್ ನಾಯಕನಾದಾಗಲೂ ಹಾಗೆ ಆಗಿದ್ದುಂಟು. ವೈಯಕ್ತಿಕವಾಗಿ ಆಕ್ರಮಣಕಾರಿ ಆಟಗಾರರಾದವರು, ನಾಯಕರಾದ ಬಳಿಕ ಹಿಂದಿನಂತೆ ಮುನ್ನುಗ್ಗಿ ಆಟವಾಡುವ ಬದಲು ಎಚ್ಚರಿಕೆಯಿಂದ ಆಟವಾಡುವುದು ಜಾಣತನ ಎನ್ನುವವರೂ ಇದ್ದಾರೆ. ಕೊಹ್ಲಿ ಇದಕ್ಕೆ ಅಪವಾದ. ಆತನದ್ದು ಏನಿದ್ದರೂ ಮುನ್ನುಗ್ಗಿ ಎದುರಾಳಿಗಳ ಮೇಲೆ ಸದಾ ಎರಗುವ ಆಟದ ಸ್ವಭಾವ.

ಮೈದಾನದಲ್ಲಿ ಇದು ಸರಿಯೇ. ಆದರೆ ಮೈದಾನದ ಹೊರಗೆ? ಈ ಪ್ರಶ್ನೆ ಮೊದಲ ಸಲ ದೊಡ್ಡದಾಗಿ ಕೇಳಿಸಿದ್ದು ಇತ್ತೀಚೆಗೆ ಕೊಹ್ಲಿ ಮಾಡಿದ ದೇಶಪ್ರೇಮದ ಕುರಿತ ಕಾಮೆಂಟಿನಿಂದ. ಕ್ರಿಕೆಟ್ ಅಭಿಮಾನಿಯೊಬ್ಬ ಸಹಜವಾಗಿಯೇ, ಭಾರತ ತಂಡಕ್ಕಿಂತ ನಾನು ಆಸ್ಟ್ರೇಲಿಯ ತಂಡದ ಆಟವನ್ನು ಹೆಚ್ಚು ಮೆಚ್ಚುತ್ತೇನೆ, ಆಸ್ಟ್ರೇಲಿಯಾ ಗೆಲ್ಲಲೆಂದು ಬಯಸುತ್ತೇನೆ ಎಂಬ ಕಾಮೆಂಟ್ ಹಾಕಿದ್ದು ಕೊಹ್ಲಿಯನ್ನು ಕೆರಳಿಸಿತ್ತು. ‘ಇಂತಹವರು ದೇಶ ಬಿಟ್ಟು ಹೋಗಲಿ’ ಎಂದು ಕೊಹ್ಲಿ ನೀಡಿದ ಪ್ರತಿಕ್ರಿಯೆ ತಕ್ಷಣಕ್ಕೆ ಹಲವರನ್ನು ಅಚ್ಚರಿಯಲ್ಲಿ ಕೆಡವಿತ್ತು. ಇದರ ಅರ್ಥ ಏನು? ಎನ್ನುವುದರ ಬಗ್ಗೆ ಮಾಧ್ಯಮಗಳಲ್ಲಿ ಬಹುದೊಡ್ಡ ಚರ್ಚೆಯೂ ನಡೆಯಿತು. ಕ್ರಿಕೆಟ್ ಅಭಿಮಾನಿಗಳಿಗೆ ಯಾವುದೇ ಆಟಗಾರರನ್ನು ಮೆಚ್ಚುವ ಹಕ್ಕಿದೆ, ಕೊಹ್ಲಿ ಇಂತಹ ವಿಷಯಗಳಲ್ಲಿ ದೇಶಪ್ರೇಮವನ್ನು ಹುಡುಕಬಾರದು ಎಂದು ಬಹಳಷ್ಟು ಜನ ಬುದ್ಧಿಮಾತು ಹೇಳಿದರು. ‘ಇದು ದುರಹಂಕಾರದ ಮಾತು’ ಎಂದು ಹಿರಿಯ ನಟ ನಾಸಿರುದ್ದೀನ್ ಶಾ ಹೇಳಿದ್ದೂ ದೊಡ್ಡ ಸುದ್ದಿಯಾಯಿತು. ಕೆಲವು ಅಭಿಮಾನಿಗಳು ಕೊಹ್ಲಿ ಹೇಳಿದ್ದು ಸರಿಯಾಗಿಯೇ ಇದೆ ಎಂದರು. ಈ ಹೇಳಿಕೆಗೆ ರಾಜಕೀಯ ಅರ್ಥಗಳೂ ಹುಟ್ಟಿ ಕೊಹ್ಲಿ ಬಗ್ಗೆ ಅಸಮಾಧಾನವೂ ಹುಟ್ಟಿಕೊಂಡಿತು.

ಮೈದಾನದಲ್ಲಿ ಕೊಹ್ಲಿ ಸದಾ ಆಕ್ರಮಣಕಾರಿ ಸ್ವಭಾವವನ್ನೇ ಪ್ರದರ್ಶಿಸುವುದಿದೆ. ಪತ್ರಿಕಾಗೋಷ್ಠಿಗಳಲ್ಲೂ ಆತ ನಗುವುದು ಕಡಿಮೆಯೇ. ಹಾಸ್ಯವಂತೂ ದೂರವೇ ಉಳಿಯಿತು. ಇವತ್ತಿನ ಒತ್ತಡದ ಕ್ರಿಕೆಟ್ ಪಂದ್ಯಗಳಲ್ಲಿ ಈ ನಿಲುವು ಗೆಲುವಿಗೆ ಪೂರಕವೇ ಇರಬಹುದು. ಅದನ್ನು ಹಲವು ವಿಶ್ವಖ್ಯಾತ ಆಟಗಾರರೂ ಹೇಳಿದ್ದಾರೆ. ಇತ್ತೀಚೆಗೆ ವೆಸ್ಟಿಂಡೀಸ್‌ನ ಮಾಜಿ ಕಪ್ತಾನ, ವಿವಿಯನ್ ರಿಚರ್ಡ್ಸ್ ಕೂಡಾ ಕೊಹ್ಲಿಯನ್ನು ಮೆಚ್ಚಿ ಮಾತನಾಡಿದ್ದಾರೆ. ‘ಆಕ್ರಮಣಕಾರಿ ನಿಲುವು ತಳೆಯುವುದರಲ್ಲಿ ತಪ್ಪೇನೂ ಇಲ್ಲ. ಆತ ಪಂದ್ಯಗಳಲ್ಲಿ ತೀವ್ರ ಸ್ಪರ್ಧೆ ಮತ್ತು ಖಚಿತ ಫಲಿತಾಂಶ ನಿರೀಕ್ಷೆ ಮಾಡುತ್ತಾನೆ. ಮಾತ್ರವಲ್ಲ ಸದಾ ಕಾಲ ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡುತ್ತಾನೆ. ಆಕ್ರಮಣಕಾರಿಯಾಗಿ ಇರಲಿ ಬಿಡಿ' ಎಂದು ರಿಚರ್ಡ್ಸ್ ಹೇಳಿದ್ದಾರೆ.

ಭಾರತದ ಮಾಜಿ ನಾಯಕ ಹಾಗೂ ಭಾರತೀಯ ಕ್ರಿಕೆಟ್‌ನ ಪ್ರಭಾವಶಾಲಿ ಧ್ವನಿ ಸುನಿಲ್ ಗಾವಸ್ಕರ್ ಇತ್ತೀಚೆಗೆ ಕೊಹ್ಲಿ ನಿಲುವುಗಳ ಬಗ್ಗೆ ಎಚ್ಚರಿಕೆಯ ನುಡಿಗಳನ್ನು ಆಡಿರುವುದು ಕುತೂಹಲಕರ. ‘ತಂಡದ ಆಯ್ಕೆಯ ವಿಷಯದಲ್ಲಿ ಕೊಹ್ಲಿ ಮತ್ತು ಮ್ಯಾನೇಜ್ಮೆಂಟ್ ಇನ್ನಷ್ಟು ಎಚ್ಚರಿಕೆ ವಹಿಸಬೇಕು. ಸ್ಟೀವ್‌ಸ್ಮಿತ್ ಮತ್ತು ಡೇವಿಡ್ ವಾರ್ನರ್ ಇಲ್ಲದೆ ದುರ್ಬಲ ಆಸ್ಟ್ರೇಲಿಯನ್ ತಂಡದ ವಿರುದ್ಧ ಸೋಲುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ’ ಎನ್ನುವುದು ಗಾವಸ್ಕರ್ ಹೇಳಿಕೆ. ಆಯ್ಕೆ ವಿಷಯದಲ್ಲಿ ಕೊಹ್ಲಿ ನಿಲುವಿನ ಕುರಿತ ಟೀಕೆ 2018ರ ಆರಂಭದಿಂದಲೂ ಕೇಳಿಸುತ್ತಿದೆ. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ಮಧ್ಯಮ ಕ್ರಮಾಂಕಕ್ಕೆ ಅಜಿಂಕ್ಯಾ ರಹಾನೆ ಬದಲು ರೋಹಿತ್ ಶರ್ಮಾ ಆಯ್ಕೆ ಮಾಡಿದ್ದು ಆ ಬಳಿಕ ತಪ್ಪು ಎನ್ನುವುದೂ ಗೊತ್ತಾಯಿತು. ಪ್ರವಾಸಗಳಲ್ಲಿ ಪ್ರಾಕ್ಟೀಸ್ ಮ್ಯಾಚ್‌ಗಳಿಗೆ ಗಮನ ನೀಡದಿರುವುದೂ ಕೊಹ್ಲಿ ವಿರುದ್ಧ ಕೇಳಿಸಿರುವ ಪ್ರಮುಖ ಟೀಕೆಯೇ.

ಕೊಹ್ಲಿಯನ್ನು ಇಂತಹ ವಿಷಯಗಳಿಗೆ ಎಷ್ಟೇ ಟೀಕಿಸಿದರೂ ಅವುಗಳೆಲ್ಲ ತಂಡದ ವಿಜಯದ ದುಂದುಭಿಯಲ್ಲಿ ಕೊಚ್ಚಿ ಹೋಗುತ್ತಿವೆ. ಮೈದಾನದಲ್ಲಿ ಆತನ ದಾಖಲೆಗಳು ಎಲ್ಲರ ಬಾಯಿ ಮುಚ್ಚಿಸುವಲ್ಲಿ ಸಫಲವಾಗಿವೆ. 2013ರಿಂದ ಟೆಸ್ಟ್ ತಂಡದ ನಾಯಕನಾಗಿರುವ ಕೊಹ್ಲಿ, ಒಂದು ದಿನ ಪಂದ್ಯ, ಟಿ 20 ಪಂದ್ಯಗಳಲ್ಲೂ ಏಕಪ್ರಕಾರವಾಗಿ ಅತ್ಯುತ್ತಮ ಆಟ ಆಡುತ್ತಿರುವುದು ಸುಳ್ಳಲ್ಲ. ಟೆಸ್ಟ್‌ನಲ್ಲಿ 54 ದಾಟಿದ ರನ್ ಸರಾಸರಿ, ಒಂದು ದಿನ ಪಂದ್ಯದಲ್ಲಿ 59 ದಾಟಿರುವ ಸರಾಸರಿ ಮತ್ತು ಟಿ20ನಲ್ಲಿ 49 ದಾಟಿರುವ ಸರಾಸರಿ ಎಂದರೆ ಸುಮ್ಮನೇ ಮಾತಲ್ಲ, ಎಂತಹ ಪ್ರತಿಭಾವಂತರಿಗೂ ಸಾಧ್ಯವಾಗುವ ಮಾತಲ್ಲ. ಭಾರತೀಯ ಕ್ರಿಕೆಟಿಗರಲ್ಲೇ ಇದುವರೆಗಿನ ಅತ್ಯುತ್ತಮ ಸಾಧನೆಯ ರೇಟಿಂಗ್ ಹೊಂದಿರುವಾತ ಈ ಕೊಹ್ಲಿ. ಟೆಸ್ಟ್‌ನಲ್ಲಿ 937 ಪಾಯಿಂಟ್ಸ್, ಒಂದು ದಿನ ಪಂದ್ಯದಲ್ಲಿ 911 ಪಾಯಿಂಟ್ಸ್ ಮತ್ತು ಟಿ20 ಯಲ್ಲಿ 897 ಪಾಯಿಂಟ್ಸ್ ಏಕಕಾಲದಲ್ಲಿ ಸಾಧಿಸಿರುವುದು ಕೊಹ್ಲಿ ಸದ್ಯಕ್ಕೆ ಪ್ರಶ್ನಾತೀತ ನಾಯಕ ಎನ್ನುವುದನ್ನೇ ತೋರಿಸುತ್ತದೆ.

ಕೊಹ್ಲಿ ಏನೇ ಹೇಳಿದರೂ ಬೆಂಬಲಿಸುವ ದೊಡ್ಡದೊಂದು ಅಭಿಮಾನಿ ಪಡೆಯನ್ನೇ ಈ ಸಾಧನೆ ಸೃಷ್ಟಿಸಿದೆ. ಆತನ ಜನಪ್ರಿಯತೆಯೂ ಒಂದೇ ಸಮನೆ ಏರುತ್ತಿದೆ. ವಿಶ್ವದಲ್ಲೇ ಅತ್ಯಧಿಕ ಸೆಂಚುರಿಗಳನ್ನು ಬಾರಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಕೊಹ್ಲಿ, ಕೇವಲ 205 ಇನಿಂಗ್ಸ್‌ಗಳಲ್ಲಿ 10ಸಾವಿರ ರನ್‌ಗಳನ್ನು ಹೊಡೆದು ಜಗತ್ತಿನ ಅತ್ಯಂತ ವೇಗದ ಬ್ಯಾಟುಗಾರ ಎಂಬ ಕೀರ್ತಿಯನ್ನೂ ಹೊತ್ತುಕೊಂಡಿದ್ದಾರೆ. ವರ್ಷಕ್ಕೆ ಬಿಸಿಸಿಐ ನಿಂದ 24 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿರುವ ಕೊಹ್ಲಿ, ಐಪಿಎಲ್‌ನಲ್ಲಿ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡಕ್ಕೆ ಅತ್ಯಧಿಕ 17 ಕೋಟಿ ರೂಪಾಯಿಗೆ ಮಾರಾಟವಾಗಿದ್ದಾನೆ, ಕಳೆದ ವರ್ಷದ ಕೊನೆಗೆ ಮಾರುಕಟ್ಟೆಯಲ್ಲಿ ಆತನ ಬ್ರ್ಯಾಂಡ್ ಮೌಲ್ಯ 936 ಕೋಟಿ ರೂಪಾಯಿ! ಹಿಂದಿನ ವರ್ಷಕ್ಕಿಂತ ಇದು ಶೇಕಡಾ 56ರಷ್ಟು ಹೆಚ್ಚಳವಾಗಿದ್ದು ಈ ವರ್ಷದ ಮತ್ತಷ್ಟು ಹೆಚ್ಚುವ ನಿರೀಕ್ಷೆ ಇದೆ. ಮಾನ್ಯವಾರ್, ಆಡಿ, ಎಂಆರ್‌ಎಫ್, ಟಿಸ್ಸಾಟ್, ಪೂಮಾ, ಬೂಸ್ಟ್, ಕಾಲ್ಗೇಟ್, ವಿಕ್ಸ್ ಮುಂತಾಗಿ 20ಕ್ಕೂ ಹೆಚ್ಚು ವಿಶ್ವವಿಖ್ಯಾತ ಬ್ರ್ಯಾಂಡ್‌ಗಳ ವಾಣಿಜ್ಯ ರಾಯಭಾರಿಯಾಗಿರುವ ಕೊಹ್ಲಿ ಸದ್ಯಕ್ಕಂತೂ ಭಾರತೀಯ ಕ್ರಿಕೆಟ್‌ನ ಅನಭಿಷಿಕ್ತ ದೊರೆಯೇ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65